

ಹೈಪರ್ ರಿಯಲಿಸಂ ಆರ್ಟ್

'ಯಾಸ್ ಎಷ್ಟು ಚೆನ್ನಾಗಿ ಪೇಂಟ್ ಮಾಡುತ್ತಾನೆಂದರೆ – ಅದರಲ್ಲಿ ನಿಜವಾದ ವಸ್ತುವಿನ ಫೋಟೊ ಯಾವುದು ಅಥವಾ ಪೇಟಿಂಗ್ ಯಾವುದು ಎನ್ನುವುದು ಗೊತ್ತೇ ಆಗುವುದಿಲ್ಲ!' ಎನ್ನುವ ಮಾತು ಅಲ್ಲಿನ ಕಲಾವಲಯದಲ್ಲಿದೆ.

ವಸ್ತುವನ್ನು ಅದರ ಪಡಿನೆಳಲಿನಂತೆ ಚಿತ್ರಿಸುವುದು ಹಲವಾರು ಗಂಟೆಗಳ ಸಮಯವನ್ನೂ ಸಾವಧಾನವನ್ನೂ ಬಯಸುವ ಕುಸುರಿ ಕೆಲಸ. ಈ ಕುಸುರಿ ಕೆಲಸದಲ್ಲಿ ಯಾಸ್ ಸಾಕಷ್ಟು ಪಳಗಿದ್ದಾನೆ. ಹಣ್ಣು ಮತ್ತು ತರಕಾರಿಗಳ ಅಡ್ಡ ಛೇದನ, ಐಸ್ ಕ್ರೀಮ್‌ಗಳು, ಕಾಕ್‌ಟೇಲ್‌ಗಳು ಮುಂತಾದ ವಸ್ತುಗಳನ್ನು ಅವು ಕಾಣುವ ರೀತಿಯಲ್ಲೇ ಈತ ಚಿತ್ರಿಸಬಲ್ಲ. ಇವುಗಳಲ್ಲಿನ ಅತ್ಯದ್ಭುತವಾದ ರಚನೆ ಎಂದರೆ, ಹಸಿ ಮೊಟ್ಟೆಯನ್ನು ಆಕ್ರಿಲಿಕ್ ಬಣ್ಣಗಳಲ್ಲಿ ಚಿತ್ರಿಸಿರುವುದು.

ಸಂಗೀತಗಾರ ನಿತ್ಯ ರಿಯಾಜ್ ಮಾಡಿದಂತೆ ಯಾಸ್‌ನ ಅಭ್ಯಾಸ ಅನುದಿನ ನಡೆಯುತ್ತದೆ. ಆತ ಪ್ರತಿದಿನ ನಾಲ್ಕು ತಾಸುಗಳನ್ನು ಪೇಂಟಿಂಗ್‌ಗಾಗಿ ಮೀಸಲಿಡುತ್ತಾನಂತೆ. ಹೀಗಾದರೂ ಒಂದು ಕಲಾಕೃತಿಯನ್ನು ಪೂರ್ಣಗೊಳಿಸಲು ಹಲವು ದಿನಗಳೇ ಬೇಕಾಗುತ್ತವೆ. ಇಷ್ಟೆಲ್ಲ ಶ್ರಮದ ನಂತರದ ಫಲಿತಾಂಶ ಜಾದೂವಿನಂತಿರುತ್ತದೆ. ಯಾವುದು ಫೋಟೊ, ಯಾವುದು ಪೇಂಟಿಂಗ್ ಎಂದು ಯಾರಿಗೂ ಸುಲಭಕ್ಕೆ ಕಂಡು ಹಿಡಿಯಲು ಸಾಧ್ಯವಾಗುವುದಿಲ್ಲ. ಬೇರೆಯವರ ಮಾತಿರಲಿ, ಯಾಸ್‌ನನ್ನು ಹಿಂಬಾಲಿಸುವ ಕಟ್ಟಾ ಅಭಿಮಾನಿಗಳು ಕೂಡ ಗೊಂದಲಕ್ಕೆ ಬೀಳುತ್ತಾರಂತೆ.

ಈ ಬರಹದ ಜೊತೆಗಿರುವ ಚಿತ್ರಗಳಲ್ಲಿ ಫೋಟೊ ಹಾಗೂ ಕಲಾಕೃತಿ ಯಾವುದೆನ್ನುವುದನ್ನು ಗಮನಿಸಿ ನೋಡಿ. ಎಡಭಾಗದಲ್ಲಿರುವ ಚಿತ್ರ ಪೇಂಟಿಂಗ್ ಎಂದು ನೀವು ಗುರುತಿಸಿದ್ದರೆ ನಿಮ್ಮ ಊಹೆ ಕರೆಕ್ಟ್! ಆದರೂ ಇದೊಂದು ಊಹೆಯೇ ಹೊರತು, ಖಚಿತವಾದ ತೀರ್ಮಾನವೇನಲ್ಲ ಎನ್ನುವುದನ್ನು ನೀವು ಅಲ್ಲಗಳೆಯಲಾರಿರಿ. ಅಂದಹಾಗೆ, ಏನಿದು 'ಹೈಪರ್ ರಿಯಲಿಸಂ ಪೇಂಟಿಂಗ್?'

ಹೈಪರ್ ರಿಯಲಿಸಂ ಎನ್ನುವುದು ಛಾಯಾಚಿತ್ರದ ಜೊತೆಗೆ ತಳಕು ಹಾಕಿಕೊಂಡ ಚಿತ್ರಕಲೆಯ ಒಂದು ಶೈಲಿ. ಛಾಯಾಚಿತ್ರದ ಪಡಿಯಚ್ಚಿನಂತೆ ಚಿತ್ರಿಸುವ ಕಲೆಯಿದು. ಇದೊಂದು ಸ್ವತಂತ್ರ ಕಲಾ ಮಾಧ್ಯಮವಾಗಿಯೂ ಇತ್ತೀಚಿನ ವರ್ಷಗಳಲ್ಲಿ ಜನಪ್ರಿಯತೆ ಪಡೆಯುತ್ತಿದೆ. 1970ರ ದಶಕದಲ್ಲಿ ಯುರೋಪ್ ಮತ್ತು ಅಮೆರಿಕಗಳಲ್ಲಿ ಸ್ವತಂತ್ರ ಕಲಾ ಚಳವಳಿಯಾಗಿ ಗುರ್ತಿಸಿಕೊಂಡ 'ಹೈಪರ್ ರಿಯಲಿಸಂ' ಅಂದಿನ ಯುವ ಕಲಾವಿದರನ್ನು ದೊಡ್ಡ ಸಂಖ್ಯೆಯಲ್ಲಿ ಸೆಳೆದಿತ್ತು.

ಕಲಾಕೃತಿಗಳ ವ್ಯವಹಾರದಲ್ಲಿ ಹೆಸರು ಮಾಡಿದ್ದ ಬೆಲ್ಜಿಯಂನ ಇಸಿ ಬ್ರಾಕೊಟ್ ಎನ್ನುವ ವ್ಯಕ್ತಿ 1973ರಲ್ಲಿ ಮೊದಲ ಬಾರಿಗೆ 'ಹೈಪರ್ ರಿಯಲಿಸಂ' ಎನ್ನುವ ಪದ ಬಳಸಿದ. ಬ್ರುಸೆಲ್ಸ್‌ನಲ್ಲಿ ನಡೆದ ಬಹು ದೊಡ್ಡ ಪ್ರದರ್ಶನವೊಂದರಲ್ಲಿ ಈ ಪರಿಕಲ್ಪನೆಯನ್ನು ಬಳಸಲಾಯಿತು. ಈ ಪ್ರದರ್ಶನದಲ್ಲಿ ಅಮೆರಿಕ ಮತ್ತು ಯುರೋಪ್‌ನ ಪ್ರಮುಖ ಕಲಾವಿದರ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು.

ಶಿಲ್ಪಕಲೆಗೆ ಸಂಬಂಧಿಸಿದಂತೆಯೂ 'ಹೈಪರ್ ರಿಯಲಿಸಂ' ಪರಿಕಲ್ಪನೆಯನ್ನು ಬಳಸಲಾಗುತ್ತದೆ. ಶಿಲ್ಪವೊಂದನ್ನು ರೂಪಿಸುವುದಕ್ಕೆ ಆಕರವಾಗಿ ಛಾಯಾಚಿತ್ರವೊಂದನ್ನು ಬಳಸಿಕೊಳ್ಳಲಾಗುತ್ತದೆ. ಈ ವಿಧಾನದಲ್ಲಿ ಮೂಲಚಿತ್ರದಲ್ಲಿ ಸೂಕ್ಷ್ಮವಾದ ಸಂಗತಿಯಗಳನ್ನು ಶಿಲ್ಪದಲ್ಲಿ ಮೂಡಿಸಲು ಗಮನಹರಿಸಲಾಗುತ್ತದೆ.

ಒಂದೇ ವಸ್ತುವಿನಂತೆ ಮತ್ತೊಂದು ವಸ್ತುವನ್ನು ಸೃಷ್ಟಿಸುವುದು ಆಧುನಿಕ ಸಂದರ್ಭದಲ್ಲಿ ಒಂದು ವ್ಯಾಪಾರಿ ಮೌಲ್ಯವಾಗಿ ರೂಪುಗೊಳ್ಳುತ್ತಿದೆಯಷ್ಟೆ. ಆ ಕಾರಣದಿಂದಲೇ ಪಡಿಯಚ್ಚಿನಂತಹ ವಸ್ತುಗಳು ಸಾವಿರಾರು ಸಂಖ್ಯೆಯಲ್ಲಿ ರೂಪುಗೊಂಡು ಬಜಾರುಗಳನ್ನು ತುಂಬುತ್ತವೆ. ಈ ವ್ಯಾಪಾರಿ ತಂತ್ರ ಕಲೆಯಲ್ಲೂ ಬಳಕೆಯಾಗುತ್ತಿರುವುದು ಹಾಗೂ ಜನಪ್ರಿಯಗೊಂಡಿರುವುದು ವಿಶೇಷ. ಆದರೆ, ನೈಜತೆಗೆ ಇರುವ ಮೌಲ್ಯ ಇದ್ದೇಇರುತ್ತದೆ. ಅದೆಷ್ಟೇ ಸಹಜ ಎಂದಾದರೂ ಅದು ಕೇವಲ ಪಡಿಯಚ್ಚು ಮಾತ್ರ ಎನ್ನುವ ಸತ್ಯವನ್ನು ಬದಲಿಸಲಾಗದು. ಆ ಕ್ಷಣದ ರೋಮಾಂಚನದಾಚೆಗೆ 'ಹೈಪರ್ ರಿಯಲಿಸಂ' ಸಹೃದಯರನ್ನು ಒಳಗೊಳ್ಳುವುದು ಕಷ್ಟ ಎನ್ನುವುದು ಆ ಕಲಾಪ್ರಕಾರಕ್ಕಿರುವ ಚೌಕಟ್ಟೇ ಹೌದು.

